# ಹೆಸರಿನ ಹಿಂದೆ...

ಹೆಸರಿನಲ್ಲೇನಿದೆ ಎನ್ನುವ ಪ್ರಶ್ನೆಯಂತೆಯೇ, ಹೆಸರಿನಲ್ಲೇ ಎಲ್ಲವೂ ಇದೆ ಎನ್ನುವ ಉತ್ತರವೂ ಇದೆ. ಹೆಸರಿಗೆ ತಲೆ ಕೆಡಿಸಿಕೊಳ್ಳದವರಂತೆ, ಹೆಸರಿಗಾಗಿ ಉಸಿರನ್ನೂ ಅಮುಖ್ಯವಾಗಿ ಕಾಣುವವರೂ ಇದ್ದಾರೆ.

ಹೆಸರೊಂದರ ಉದ್ದೇಶವಾದರೂ ಏನು? ವ್ಯಕ್ತಿಯನ್ನು, ವಸ್ತುವನ್ನು ಗುರ್ತಿಸಲಿಕ್ಕೆ ಒಂದು ಹೆಸರು ಬೇಕು. ಊರು–ದೇಶವನ್ನು ಗುರ್ತಿಸಲಿಕ್ಕೂ ಒಂದು ಹೆಸರು ಬೇಕು. ಹೀಗೆ ಗುರ್ತಿಸುವುದರ ಹೊರತು ಹೆಸರಿಗೆ ಮತ್ತೊಂದು ಉದ್ದೇಶವಿದ್ದಂತಿಲ್ಲ. ಇದ್ದರೂ ಅದಕ್ಕೆ ವಾಸ್ತವದ ಬೆಂಬಲವಿಲ್ಲ. ಉದಾಹರಣೆ ನೋಡಿ. ಹೆಸರನ್ನು ನೋಡಿ ಮನುಷ್ಯನೊಬ್ಬನ ವ್ಯಕ್ತಿತ್ವ, ಸ್ಥಾನಮಾನ ಅಥವಾ ಪ್ರತಿಭೆ ಅಳೆಯಲಿಕ್ಕೆ ಶಕ್ಯವೆ? ಹಾಗೆಯೇ ಊರಿನ ಹೆಸರು ಅಮರಾವತಿ ಎಂದಿದ್ದ ಮೇಲೆ, ಅದನ್ನು ಕಾಮಧೇನು ಕಲ್ಪವೃಕ್ಷಗಳ ನೆಲೆಬೀಡು ಎಂದು ಭಾವಿಸಲಾಗದು. 'ಅಗುಳಿನ ಮೇಲೆ ಅನ್ನದ ಪರೀಕ್ಷೆ' ಎನ್ನುವಂತೆ, ಹೆಸರಿನ ಮೇಲೆ ವ್ಯಕ್ತಿಯ–ಊರಿನ ಸಮೀಕ್ಷೆ ಸಾಧ್ಯವಾಗದು. ಹೂರಣವೇ ಬೇರೆ, ಹೆಸರೇ ಬೇರೆ.

ಹೆಸರಿನಲ್ಲೇನಿದೆ ಎನ್ನುವ ಪ್ರಶ್ನೆ ಹೆಸರಿನ ಮಹತ್ವವನ್ನು ತೆಳುವಾಗಿಸುವಂತೆ, ಹೆಸರಿನಲ್ಲೇ ಎಲ್ಲವೂ ಇದೆ ಎನ್ನುವ ಉತ್ತರ ಹೆಸರಿಗೆ ಇನ್ನಿಲ್ಲದ ಮಹತ್ವವನ್ನು ತಂದುಕೊಡುತ್ತದೆ. ಹೆಸರು ಮತ್ತು ಹೂರಣದ ನಡುವಿನ ಸಮನ್ವಯದಲ್ಲಿ ಹೆಸರಿನ ಸಾರ್ಥಕತೆ ಇರಬಹುದೆ?

ಹೆಸರಿನಿಂದ ಹೂರಣವೇನೂ ಬದಲಾಗುವುದಿಲ್ಲ ಎನ್ನುವುದು ತಿಳಿದಿದ್ದರೂ, ಹೆಸರಿನ ಕುರಿತ ನಮ್ಮ ಕಸರತ್ತುಗಳಿಗೇನೂ ಕಡಿಮೆಯಿಲ್ಲ. ಹೆಸರು ಗಳಿಸಲು ಶ್ರಮಿಸುವಂತೆಯೇ, ಹೆಸರು ಕೆಡಿಸಲೂ ಒದ್ದಾಡುತ್ತೇವೆ. ಇರುವುದೆಲ್ಲವ ಬಿಟ್ಟು ಇರದುದರೆಡೆಗಿನ ತುಡಿತದಂತೆ, ಇರುವ ಹೆಸರನು ಬಿಟ್ಟು ಹೊಸ ಹೆಸರಿಗಾಗಿ ಹಂಬಲಿಸುತ್ತೇವೆ.

ಹೆಸರಿನಿಂದ ಹೂರಣ ಬದಲಾಗುವುದಿಲ್ಲವೆನ್ನುವುದೇನೋ ಸರಿ. ಆದರೆ, ಹೂರಣದಿಂದ ಹೆಸರಿಗೆ ಮೆರುಗು ದೊರೆಯುವ ಸಾಧ್ಯತೆಯಿದೆ. ಇದಕ್ಕೆ ಕೃಷ್ಣ–ಗಣೇಶರ ಜೀವನ ಉತ್ತಮ ಉದಾಹರಣೆ.

ಕೃಷ್ಣ ಭಗವದ್ಗೀತೆಯಿಂದ ಸ್ಮರಣೀಯ. ಗೀತೆಯ ಪ್ರಭಾವಳಿ ಇಲ್ಲದೆ ಹೋಗಿದ್ದರೆ ಕೃಷ್ಣನ ಲೀಲಾವಿಲಾಸಗಳಿಗೆ ತಾತ್ವಿಕ ನೆಲೆಗಟ್ಟೇ ಇಲ್ಲದೆ ಹೋಗುತ್ತಿತ್ತು. ಮಹಾಭಾರತದ ಬರವಣಿಗೆಯ ಐತಿಹ್ಯ ಹಾಗೂ ಅರಿವಿನ ರೂಪಕದ ಸಂಕೇತಗಳ ಹೊರತಾಗಿ ಗಣಪತಿ ಅಪರಿಪೂರ್ಣ. ಈ ತಿಳಿವಿನ ಸಖ್ಯವನ್ನು ಎರಡು ರೀತಿಯಲ್ಲಿ ನೋಡಬಹುದು. ಒಂದು, ಅರಿವಿಗೆ, ಸಾಹಿತ್ಯದ ಮೂಲಕ ಒದಗುವ ಅರಿವಿಗೆ, ಬದುಕು ಹಾಗೂ ವ್ಯಕ್ತಿತ್ವಕ್ಕೆ ಹೊಸ ಹೊಳಪು ತಂದುಕೊಡುವ ಶಕ್ತಿಯಿದೆ; ಆ ಹೊಳಪನ್ನು ಸಮಾಜವೂ ಗೌರವಿಸುತ್ತದೆ. ಎರಡು, ಗೀತೆ ಹಾಗೂ ಅರಿವಿನ ಸಿದ್ಧಿಗಳು ಕೃಷ್ಣ–ಗಣೇಶರು ಪ್ರಯತ್ನಪೂರ್ವಕವಾಗಿ ರೂಪಿಸಿಕೊಂಡ ಹೆಸರುಗಳು.

ಹೆಸರನ್ನು ರೂಪಿಸಿಕೊಳ್ಳುವುದು ಎಂದರೇನು? ಒಂದಲ್ಲಾ ಒಂದು ಸಂದರ್ಭದಲ್ಲಿ 'ಒಳ್ಳೆಯ ಹೆಸರು ಮಾಡಬೇಕು' ಎನ್ನುವ ಮಾತನ್ನು ನಾವೆಲ್ಲ ಬಳಸಿರುತ್ತೇವೆ. ಹೆಸರು ಎಂದರೇನು ಎನ್ನುವುದು ನಮಗೆ ತಿಳಿಯುವ ಮೊದಲೇ ನಮಗೊಂದು ಹೆಸರು ಅಂಟಿಕೊಂಡಿರುತ್ತದೆ. ಹುಟ್ಟಿನೊಂದಿಗೇ ನಮಗೊಂದು ಹೆಸರಿರುವಾಗ, ಹೊಸತಾಗಿ ಮತ್ತೊಂದು ಹೆಸರನ್ನು ಗಳಿಸುವುದು ಎಂದರೇನು? ಗಳಿಸುವ ಹೆಸರು ಸಾಧನೆಗೆ ಸಂಬಂಧಿಸಿದ್ದು. ವ್ಯಕ್ತಿತ್ವದ ವರ್ಚಸ್ಸಿಗೆ ಸಂಬಂಧಿಸಿದ್ದು. ಯಾವುದಾದರೊಂದು ಕ್ಷೇತ್ರದಲ್ಲಿ ನಾವು ಮಾಡಿದ ಸಾಧನೆಯಿಂದ ದೊರೆಯುವ ಹೆಸರು, ಸಮಾಜ ಅಹುದಹುದೆನ್ನುವಂತೆ ವ್ಯಕ್ತಿತ್ವವನ್ನು ಅಪರಂಜಿಯಾಗಿಸಿಕೊಳ್ಳುವುದರಿಂದ ದೊರೆಯುವ ಹೆಸರು, ಜನ್ಮದತ್ತವಾಗಿ ನಮಗೆ ದೊರೆತ ಹೆಸರಿನ ಕಿಮ್ಮತ್ತನ್ನು ಹೆಚ್ಚಿಸುವುದು. ಕೃಷ್ಣನ ಹೆಸರು ಲೋಕಪ್ರಿಯವಾಗಲಿಕ್ಕೆ ಕಾರಣ, ಭಗವದ್ಗೀತೆ. ಗೀತೆಯನ್ನು ಬೋಧಿಸಿ ಗೀತಾಚಾರ್ಯ ಅನ್ನಿಸಿಕೊಳ್ಳದಿದ್ದರೆ, ನಮ್ಮ ಪುರಾಣಕಥೆಗಳ ಮೋಹಕ ಹಾಗೂ ರೋಚಕ ಹೀರೊಗಳಲ್ಲೊಬ್ಬನಾಗಿಯಷ್ಟೇ ಕೃಷ್ಣ ಉಳಿದುಬಿಡುತ್ತಿದ್ದ. ಗೀತಾಚಾರ್ಯನಾಗುವ ಮೂಲಕ, ಅನುದಿನದ ದಂದುಗಗಳಿಗೆ ಉತ್ತರದ ರೂಪದಲ್ಲಿ ಕೃಷ್ಣ ಈಗ ಒದಗುತ್ತಿದ್ದಾನೆ, ಲೋಕಪ್ರಿಯನಾಗಿದ್ದಾನೆ. ಗಣಪನೂ ಅಷ್ಟೇ. ಆನೆಮೊಗ ಹಾಗೂ ಉಬ್ಬು ಉದರದ ಗಣನಾಯಕ ಭಕ್ತಿ ಮತ್ತು ಬೆರಗಿನ ಚೌಕಟ್ಟನ್ನು ದಾಟಿ, ನಿತ್ಯ ಸ್ಮರಣೀಯನಾಗಲಿಕ್ಕೆ ಕಾರಣ, ಆತ ಜ್ಞಾನದ ಸಂಕೇತವಾಗಿರುವುದು; ಮಹಾಭಾರತದ ಲಿಪಿಕಾರನಾಗಿರುವುದು.

ಹೆಸರು ಉಳಿಯುವುದು ಸಾಧನೆಯಿಂದ, ವ್ಯಕ್ತಿತ್ವದ ಸೌಂದರ್ಯದಿಂದ ಎನ್ನುವುದು ತಿಳಿದಿದ್ದರೂ, ಶಬ್ದಗಳನ್ನು ಹಿಂಜುವ ಆಟದಲ್ಲಿ ನಮಗೆ ಇನ್ನಿಲ್ಲದ ಆಸಕ್ತಿ. ಹೆಸರಿನೊಂದಿಗೆ ಅದೃಷ್ಟ ಹಾಗೂ ದುರದೃಷ್ಟವನ್ನು ತಳುಕು ಹಾಕುತ್ತೇವೆ. ಮಾಡುವ ಕೆಲಸದ ಬಗ್ಗೆ ನಿರ್ಲಕ್ಷ್ಯ ವಹಿಸುತ್ತೇವೆ. ಹೆಸರಿನ ಬಗೆಗಿನ ಈ ಕಸರತ್ತು ವೈಯಕ್ತಿಕ ನೆಲೆಗಟ್ಟಿನಲ್ಲಿ ಮಾತ್ರವಲ್ಲ, ಸಾರ್ವತ್ರಿಕ ನೆಲೆಗಟ್ಟಿನಲ್ಲೂ ನಡೆಯುತ್ತದೆ. ರಾಷ್ಟ್ರೀಯ ನೆಲೆಗಟ್ಟಿನಲ್ಲೂ ನಡೆಯುತ್ತದೆ. ಹಟ ಹಿಡಿದು ಊರು–ಸಂಸ್ಥೆಗಳ ಹೆಸರು ಬದಲಿಸುತ್ತೇವೆ. ಒಂದು ಹೆಸರನ್ನು ಸರಿಯೆಂತಲೂ, ಇನ್ನೊಂದನ್ನು ಅನರ್ಥವೆಂತಲೂ ಅರ್ಥ ಹಚ್ಚುತ್ತೇವೆ. ಆ ಬದಲಾವಣೆಯನ್ನು ಸಾಧನೆಯೆಂತಲೂ, ಚಾರಿತ್ರಿಕ ಪ್ರಮಾದವೊಂದರ ಸರಿಪಡಿಸುವಿಕೆಯೆಂತಲೂ ಬೀಗುತ್ತೇವೆ. ಈ ಬದಲಾವಣೆಯ ಪ್ರಕ್ರಿಯೆಯಲ್ಲಿ, ಬದಲಾಗುವುದು ಹೆಸರೇ ಹೊರತು ಸಾಧನೆ–ಹಿನ್ನೆಲೆ ಅಥವಾ ಸ್ವರೂಪವಲ್ಲ ಎನ್ನುವುದನ್ನು ಮರೆಯುತ್ತೇವೆ. ನಾವು ನಿಜಕ್ಕೂ ಬದಲಿಸಬೇಕಾಗಿರುವುದು ಊರಿನಲ್ಲಿನ ವಿರೂಪಗಳನ್ನು – ಜಾತೀಯತೆ, ಬಡತನ, ಲಿಂಗಭೇದಗಳನ್ನು; ಸಾಮಾಜಿಕ–ಆರ್ಥಿಕ ತರತಮಗಳನ್ನು. ಈ ಕುರೂಪಗಳನ್ನು ಇರುವಂತೆಯೇ ಬಿಡುತ್ತೇವೆ, ಕೆಲವೊಮ್ಮೆ ನಾವೇ ಆ ವಿಕೃತಿಗಳ ಭಾಗವಾಗುತ್ತೇವೆ. ಊರಿನ ಸ್ವರೂಪ ಬದಲಿಸದೆಯೇ ಹೆಸರು ಬದಲಾಯಿಸುವುದರಿಂದ ಭಾಗ್ಯದ ಬಾಗಿಲು ತೆರೆಯಿತೆಂದು ಸಂಭ್ರಮಿಸುತ್ತೇವೆ.

ಚರಿತ್ರೆ–ಪುರಾಣಗಳ ಪಾಠವೊಂದೇ: ಹೆಸರಿಗೆ ಅರ್ಥ ಬರುವುದು ಶಬ್ದಗಳಿಂದಲ್ಲ, ಸಾಧನೆಯಿಂದ, ಸ್ವರೂಪದಿಂದ, ಗುಣದಿಂದ. ಸಾಧನೆಯ ಹಂಬಲ ಹಾಗೂ ಸಾಧಿಸುವ ಸಾಮರ್ಥ್ಯ ಇಲ್ಲದಿದ್ದಾಗಷ್ಟೇ, ಹೂರಣದ ಬಗ್ಗೆ ತಲೆಕೆಡಿಸಿಕೊಳ್ಳದೆ, ಹೊರಗನ್ನು ಹುಳುಕೆಂದು ಬಗೆದು ಸರಿಪಡಿಸುವ ಶಬ್ದಕ್ರೀಡೆಗಳಲ್ಲಿ ಮೈಮರೆಯುತ್ತೇವೆ, ಇತರರನ್ನೂ ಮೈಮರೆಸಲು ಪ್ರಯತ್ನಿಸುತ್ತೇವೆ.

■ **ಚಂಪಕಮಾಲಾ**

## ಮಾತೇ ಮುತ್ತು

- ಸಂಸ್ಕೃತಿಯ ಮಹೋನ್ನತವಾದ ಮಹಲಿಗೆ ನೀತಿ ನೆಲೆಗಟ್ಟು, ಅನುಭವ ಆಧಾರ.

  –ಕೆ.ಎಸ್. ನಿಸಾರ್ ಅಹಮದ್

- ತಾನೇ ವಿಕಾಸಗೊಂಡು ತನ್ನ ಮಟ್ಟವನ್ನು ಮುಟ್ಟಬೇಕು.

  – ಎಂ. ಗೋಪಾಲಕೃಷ್ಣ ಅಡಿಗ

- ದುಡ್ಡು ಅಂದರೆ ದುಡಿದು ತರಬೇಕಾದ ವಸ್ತು.

  ನಾ. ಕಸ್ತೂರಿ

- ದೇವರು ಧನ, ಅಧಿಕಾರ ಕೊಡೋದು ಜನರಿಗೆ ಉಪಕಾರ ಮಾಡಲಿ ಅಂತ. ಆದರೆ, ಮನುಷ್ಯ ಅದನ್ನು ಜನರನ್ನು ಸುಲಿಗೆ ಮಾಡಲು ಉಪಯೋಗಿಸುತ್ತಾನೆ.

  – ತ.ರಾ.ಸು.

- ನಿರ್ಭಯವೂ, ನಿಷ್ಪಕ್ಷಪಾತವೂ ಆದ ಜಗತ್ಸತ್ಯಾನ್ವೇಷಣೆಯೇ ವಿಜ್ಞಾನ.

  –ಡಿ.ವಿ. ಗುಂಡಪ್ಪ

- ಗುರಿ ತಪ್ಪಿದರೂ , ಹಾದಿ ತಪ್ಪಬಾರದು.

  ಎಸ್.ವಿ. ಪರಮೇಶ್ವರಭಟ್

- ಪ್ರತಿಯೊಂದು ಧರ್ಮವೂ ಈ ಜಗತ್ತಿಗೆ ಪ್ರೇಮ, ಬಂಧುತ್ವದ ಸಂದೇಶವನ್ನೇ ನೀಡಿದೆ.

  –ಖಾನ್ ಅಬ್ದುಲ್ ಗಫಾರ್ ಖಾನ್

- ಮೂಡುವನು ರವಿ ಮೂಡುವನು ಕತ್ತಲೊಡನೆ ಜಗಳಾಡುವನು.

  –ಪಂಜೆ ಮಂಗೇಶರಾಯರು

- ನಾಳೆ ಏನೆಂಬ ಪ್ರಶ್ನೆಗಿಂತಲೂ 'ಇಂದು ಹೇಗೆ?' ಎನ್ನುವ ಪ್ರಶ್ನೆ ನಮಗೆ ಮಹತ್ತರವಾಗಿ ಕಾಣಬೇಕು.

  –ಶಿವರಾಮ ಕಾರಂತ